ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಈ ಸಭೆ ಪರ್ಯಾಲೋಚಿಸುವುದು."

ಪ್ರಸ್ತಾವವು ಅಂಗೀಕರಿಸದೆ ತಿರಸ್ಕರಿಸಲ್ಪಟ್ಟಿತು

Prof. M.D. Najunda Swamy :- I am walking out in protest conveying my displeasure to the Government .

(The hon.member withdrew from the House)

ಶ್ರೀ ವಾಟಾಳ್ ನಾಗರಾಜ್ :– ನಾವು ಸಹ ಇದನ್ನು ಪ್ರತಿಭಟಿಸಿ ಹೊರಗೆ ಹೋಗುತ್ತೇವೆ.

(ಪೋಲೀಸ್ ರಾಜ್ಯದ ಪೋಲೀಸ್ ಕಾಯಿದೆ ಬದಲಾವಣೆ ಆಗಬೇಕು. ಇಂಥ ಕೆಟ್ಟ ಕಾಯಿದೆ ಬದಲಾವಣೆ ಆಗಬೇಕು – ಎಂದು ಘೋಷಣೆ ಕೂಗುತ್ತಾ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸಭೆಯಿಂದ ಹೊರನಡೆದರು. ಅವರ ಜೊತೆಗೆ ಜನತಾದಳ ಸದಸ್ಯರೂ ಸಭಾತ್ಯಾಗ ಮಾಡಿದರು).

ಪ್ರಕಟಣೆ

ಉಪಾಧ್ಯಕ್ಷರು :– ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಕರ್ನಾಟಕ ಧನವಿನಿಯೋಗ (ನಂ.3) ವಿಧೇಯಕ, 1990 ಕರ್ನಾಟಕ ವಿಧಾನ ಪರಿಷತ್ತಿನಲ್ಲಿ 30.11.1990ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ."

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವುದು.

ಉಪಾಧ್ಯಕ್ಷರು :– ಶ್ರೀ ವೆಂಕಟೇಶ್‌ರವರೇ, ನೀವು ಮಾತನಾಡುತ್ತೀರಾ?

ಶ್ರೀ ಎಂ.ಪಿ. ವೆಂಕಟೇಶ್ :– ನಾನು ಐದು ನಿಮಿಷ ಮಾತನಾಡಿದ ಮೇಲೆ ತಾವು ಸಭೆಯನ್ನು ಮುಂದಕ್ಕೆ ಹಾಕಬಹುದು.

ಉಪಾಧ್ಯಕ್ಷರು :– ಸರಿ.

† ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಉಪಾಧ್ಯಕ್ಷರೇ, ಈ ಗ್ರಾನೈಟ್ ಕಲ್ಲುಗಳ ಬಗ್ಗೆ ಈಗಾಗಲೇ ಮಾನ್ಯ ಉಪನಾಯಕರಾದ ಶ್ರೀ ಸಿದ್ಧಾರವರು ಪ್ರಸ್ತಾಪ ಮಾಡಿದಹಾಗೆ ಶ್ರೀ ವಾಟಾಳ್ ನಾಗರಾಜ್‌ರವರು, ನಾನು ಮತ್ತು ಶಿವಕುಮಾರ್, ಪ್ರೊ: ನಂಜುಂಡಸ್ವಾಮಿಯವರು ಒಂದು ಸಭೆ ಕರೆದು ಮಾತನಾಡಿ ಎಂದು ಹೇಳಿದ ಹಾಗೆ ನಿನ್ನೆ ದಿವಸ ನಾವು ಸಭೆ ಸೇರಿದ್ದೆವು. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಎಲ್ಲ ಅಧಿಕಾರಿಗಳೂ ಸೇರಿದ್ದರು. ಕಳೆದ ಸರ್ಕಾರ ಒಂದು ತಿದ್ದುಪಡಿಯನ್ನು ಸಿಎ 304, ಎಂ.ಆರ್.ಸಿ. 87 ದಿನಾಂಕ 27 ಮೇ 1990ರಲ್ಲಿ ಕಳಿಸಿದೆ. ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡಿದಾಗ ಕೆಲವು ವಿಷಯಗಳನ್ನು ಪುನರ್ ಪರಿಶೀಲನೆ ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡರು ಏನು ಈ ಫ್ಯಾಕ್ಟರಿಗಳಿಗೆ ಕೊಡಬೇಕೆಂದು ನಿಯಮ ಇತ್ತು, ಅದನ್ನು ಸಡಿಲ ಮಾಡುತ್ತೇವೆ ಎಂದು ಅವರು ಚರ್ಚೆ ಮಾಡಿದಾಗ ಒಪ್ಪಿಕೊಂಡಿದ್ದರು. ಈಗ ಹಿಂದೆ ಇದ್ದಂಥ ಸರ್ಕಾರ ಬಹಳ ತರಾತುರಿಯಲ್ಲಿ ರಾಷ್ಟ್ರೀಕರಣ ಆದಮೇಲೆ ಒಂದು ಆರ್ಡಿನೆನ್ಸನ್ನು ತಂದಿತ್ತು. ಈ ಆರ್ಡಿನೆನ್ಸನ್ನು ಕೂಡಲೇ ಮಾಡಿತು. ಬಹುಶ: ಹಿಂದಿನ ಸರ್ಕಾರದ ಮಂತ್ರಿಗಳೂ ಹೋಗಿದ್ದಾರೆ, ಮತ್ತು ಹಿಂದಿನ ಸರ್ಕಾರವೂ ಹೋಗಿದೆ. ಈಗ ಹೊಸ ಸರ್ಕಾರ ರಚನೆಯಾಗಿದೆ, ಹೊಸ ಅಧಿಕಾರಿಗಳೂ ಬಂದಿದ್ದಾರೆ, ಹೊಸ ಮಂತ್ರಿಗಳೂ ಬಂದಿದ್ದಾರೆ. ಆದ್ದರಿಂದ ನಾವು ಹೊಸದಾಗಿ ಪ್ರಸ್ತಾಪ ಮಾಡುವಂತಾದ್ದು, ರೈತರ ಬಗ್ಗೆ ಮತ್ತು ಈ ಗ್ರಾನೈಟ್ ಬಗ್ಗೆ ಚರ್ಚೆ ಮಾಡಲು ಸರ್ಕಾರದವರೂ ಒಪ್ಪಿದ್ದಾರೆ. ಇದನ್ನು ತಾವು ಮುಂದಕ್ಕೆ ಹಾಕುತ್ತೇವೆಂದು ಹೇಳಿದರೆ...

ಉಪಾಧ್ಯಕ್ಷರು :– ತಮಗೆ ಇನ್ನೂ ಎಷ್ಟು ಹೊತ್ತು ಬೇಕು.

ಶ್ರೀ ಎಂ.ಪಿ. ವೆಂಕಟೇಶ್ :– ನನಗೆ ಇನ್ನೂ ಅರ್ಧಗಂಟೆ ಕಾಲ ಬೇಕಾಗುತ್ತದೆ.

ಉಪಾಧ್ಯಕ್ಷರು :– ಹಾಗಾದರೆ, ಇನ್ನು ಮುಂದಕ್ಕೆ ಹಾಕಲಾಗುತ್ತದೆ. ಈಗ ಒಂದು ಪ್ರಕಟಣೆ.

ಪ್ರಕಟಣೆ

ಇಂದು ಬೆಳಿಗ್ಗೆ ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ, ಇಂದು ಸಭೆಯನ್ನು ಮುಂದೂಡಿ, ಪುನ: ಸೋಮವಾರ ದಿನಾಂಕ : 17–12–1990ರಿಂದ ಶುಕ್ರವಾರ ದಿನಾಂಕ : 21ನೇ ಡಿಸೆಂಬರ್ 1990ರ ವರೆಗೆ ಸಮಾವೇಶಗೊಂಡು ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿದೆ.

1.	ಸೋಮವಾರ 17ನೇ ಡಿಸೆಂಬರ್ 1990ರಿಂದ ಗುರುವಾರ 20ನೇ ಡಿಸೆಂಬರ್ 1990ರ ವರೆಗೆ	ಶಾಸನ ರಚನೆ
2.	ಶುಕ್ರವಾರ 21ನೇ ಡಿಸೆಂಬರ್ 1990 ರಂದು	ಶಾಸನ ರಚನೆ ಹಾಗೂ ಖಾಸಗಿ ಕಾರ್ಯಕಲಾಪಗಳು.

ಶ್ರೀ ವಾಟಾಳ್ ನಾಗರಾಜ್ :– ಕಾರ್ಯಕಲಾಪಗಳ ಸಭೆ ನಡೆಯುವಾಗ, ಮಾನ್ಯ ಅಧ್ಯಕ್ಷರಿಗೆ ಒಂದು ಸಲಹೆ ಮಾಡಿದ್ದೆ. ಇಲ್ಲಿ ಯಾವುದೇ ವಿಧೇಯಕಗಳನ್ನು ತಂದರೂ, ಏನೇ ತಂದರೂ ಕನ್ನಡದಲ್ಲಿ ತರಬೇಕು ಎಂದು ಸಲಹೆ ಮಾಡಿದ್ದೆ. ಈಗ ಜಿಲ್ಲಾಪರಿಷತ್ತು ತಿದ್ದುಪಡಿ ಮಸೂದೆ ಬಂದಿದೆ. ಕನ್ನಡದಲ್ಲಿರತಕ್ಕ ತಿದ್ದುಪಡಿ ವಿಧೇಯಕ ನಮಗೆ ಸಿಕ್ಕೇ ಇಲ್ಲ. ನಾನು ಹೇಳಿದ್ದೆ, ಇದು ಬಹಳ ಜನರಿಗೆ ಬೇಕಾಗಿದೆ, ಈ ವಿಧೇಯಕವನ್ನು ಕನ್ನಡದಲ್ಲಿಯೂ ಮಾಡಿಸಬೇಕಾಗುತ್ತದೆ. ಇದು ಒಂದೇ ಅಲ್ಲ. ಇದು ಒಂದು ಪರಿಪಾಠವಾಗಿದೆ. ವಿಧಾನ ಮಂಡಲದ ಕಾರ್ಯಾಲಯದಲ್ಲಿಯೂ ಸಹಿತ ಇಂಗ್ಲೀಷಿನಲ್ಲಿ ಬರುತ್ತಿವೆ. ಕನ್ನಡದಲ್ಲಿ ಇಲ್ಲವೇ ಇಲ್ಲ. ಮೊನ್ನೆ ನಾನು ಹೇಳಿದಾಗ ಅಧ್ಯಕ್ಷರು ಒಪ್ಪಿದ್ದರು. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮುಂದೆ ಕನ್ನಡದಲ್ಲಿಯೇ ಬರಬೇಕು, ಕನ್ನಡದಲ್ಲೇ ತರಬೇಕೆಂದು ಎಂದು ಬಹಳ ದಿವಸಗಳಿಂದ ಹೇಳುತ್ತಿದ್ದರೂ, ಈಗಲೂ ಬಂದಿಲ್ಲ. 3–4 ದಿವಸಗಳಿಂದ ಖಾಸಗಿ ನಿರ್ಣಯಗಳು ಮಂಡನೆಯಾಗಿವೆ. ಈ ಖಾಸಗಿ ನಿರ್ಣಯಗಳನ್ನು ನಾನು ಆ ಕಡೆ, ಈ ಕಡೆ ನೋಡುತ್ತೇನೆ, ಇವು ಕೂಡ ಕನ್ನಡದಲ್ಲಿ ಇಲ್ಲ. ಇದೇ ರೀತಿ ಮುಂಗುವರಿಯುವುದಾದರೆ, ನಾವು ಧರಣಿ ಮಾಡಬೇಕಾಗತ್ತದೆ. ನಾವು ಎಷ್ಟೋ ಸಾರಿ ಈ ವಿಷಯವನ್ನು ಕೇಳಿ, ಕೇಳಿ ಸಾಕಾಗಿದೆ. ದಯಮಾಡಿ ತಾವು ಒಂದು ತೀರ್ಮಾನಕ್ಕೆ ಬರಬೇಕು. ಕನ್ನಡದಲ್ಲಿ ಆಗಲೇಬೇಕು, ಕನ್ನಡದಲ್ಲಿ ಆಗದಿರುವುದು ಸರಿಯಲ್ಲ.

ಶ್ರೀ ಎಂ.ಪಿ. ವೆಂಕಟೇಶ್ :– ಈ ವಿಷಯವನ್ನು ಹಲವಾರು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದೆ. ಅಧಿಕಾರಿಗಳ ಸೂಚನೆಯಾಗಿದೆ, ಮಂತ್ರಿಗಳ ಸೂಚನೆಯಾಗಿದೆ. ಆದರೂ ಜಿಲ್ಲಾ ಪರಿಷತ್ತಿನ ತಿದ್ದುಪಡಿ ವಿಧೇಯಕ ಇಂಗ್ಲೀಷಿನಲ್ಲಿ ತಂದಿರುವುದು ಸರಿಯಲ್ಲ.

ಉಪಾಧ್ಯಕ್ಷರು :– ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು, ಕನ್ನಡದಲ್ಲಿ ತರುವುದಕ್ಕೆ ವ್ಯವಸ್ಥೆ ಮಾಡಲಾಗುವುದು. ಖಾಸಗಿ ನಿರ್ಣಯಗಳು ಒಂದು ಕಡೆ ಇಂಗ್ಲೀಷಿನಲ್ಲಿದೆ ಒಂದು ಕಡೆ ಕನ್ನಡದಲ್ಲಿ ಇದೆ.

ಶ್ರೀ ವಾಟಾಳ್ ನಾಗರಾಜ್ :– ಯಾವ ಮಸೂದೆ ಕನ್ನಡದಲ್ಲಿ ಇದೆ ಎಂಬುದನ್ನು ತಾವು ಹೇಳಬೇಕು. ಮಾನ್ಯ ಇದಿನಬ್ಬನವರೇ, ತಾವೂ ನಮ್ಮ ಜೊತೆ ಧ್ವನಿಗೂಡಿಸಬೇಕು. ತಾವು ಕನ್ನಡದ ಕವಿಗಳು, ನಾವು ಪದೆ ಪದೇ ಹೇಳಿದರೂ, ಸರ್ಕಾರದ ನೀತಿ ಸರಿಯಲ್ಲ. ನಮಗೆ ಅವಕಾಶ ಕೊಟ್ಟರೆ, ನಾವು ಧರಣಿ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ನಮ್ಮದೂ ಅದೇ ಅಭಿಪ್ರಾಯ. ನಮ್ಮದೇನೂ ಬೇರೆ ಅಭಿಪ್ರಾಯ ಅಲ್ಲ. ಇಂಗ್ಲೀಷಿನಲ್ಲಿ ಹಂಚಿಕೆಯಾಗುವುದು ಮತ್ತು ಕನ್ನಡದಲ್ಲಿ ಹಂಚಿಕೆಯಾಗುವುದು, ಎರಡನ್ನೂ ಏಕ ರೂಪದಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ವ್ಯವಸ್ಥೆ ಮಾಡುತ್ತೇವೆ.

ಉಪಾಧ್ಯಕ್ಷರು :– ಈಗ ಸಭೆಯನ್ನು ದಿನಾಂಕ : 17–12–90ರ ವರೆಗೆ ಮುಂದೂಡಲಾಗಿದೆ.

ಸದನವು ಸಂಜೆ 4–10ಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ : 17–12–90ರಂದು ಸಮಾವೇಶಗೊಳ್ಳಲು ನಿಶ್ಚಯಿಸಿತು.

+ (ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).